.No. M. 1299 || ಸತ್ಯಾನ್ನಾಸ್ತಿ ಪರೋಧರ್ಮಃ || ಬಿಡಿ ಪ್ರತಿ 3 ಪೈ

ಸತ್ಯವಾದಿ

ಆಫೀಸ್: ಚಾಮರಾಜ ಅಗ್ರಹಾರ ಮೈಸೂರು. ಪ್ರತಿ ಗುರುವಾರವೂ ಪ್ರಕಟಿಸಲ್ಪಡುವುದು ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂ 1-8-0

ಸಂಪುಟ 7] ಮೈಸೂರು, ಗುರುವಾರ 5 ನೆ ಫೆಬ್ರವರಿ 1925 [ಸಂಚಿಕೆ 13

ಇನಾಂ! ಇನಾಂ!!

ರೇಮ್ಜೆ ಪಂಜೆ ಆಟೋಮೋಹಿನಿ ಸೆಂಟ್

ಈ ಸಕ್ಷೆಯಲ್ಲಿ ಕಂಡ ಇಂ ಕಿಲಾಬಿ ಬರೆಯುವ ಫೌಂ ಟನ್ ಪೇಸಾ ಇದಕ್ಕೆ ಕ್ಯಾರೆ ಟ್ ಭಂಗಾರದ ಮುಳ್ಳು ಹಾ ಕಿಸ್ತಾರೆ. ಇದರಿಂದ ಬರೆ ಯುವುದರಿಂದ ಅಕ್ಷರಗಳು ಮುತ್ತಿಗೆ ಹಾಗೆ ಬರೆಯುವುದು. ಈ ತಿಂ ಗಳು ಒಳಗೆ ಶರಿಸಿಕೊಳ್ಳುವವರಿಗೆ ರೇಮ್ಜೆ ಪಂಜೆ ಆಟೋಮೋಹಿನಿ ಸೆಂಟ್ ಇನಾಮು ಸಹಿತ ರೂ. 1—8—0.

ನಿಮಗೆ ಗಟ್ಟಿಯಾದ ಗಡಿಯಾರಗಳ ಬೇಕೊ? ನಿಮಗೆ ಸಾಟಿಲ್ಲದ ಖರೀದಿಗೆ ದೊರೆಯುವುದು.



ಇದು ನೋಡುವುದಕ್ಕೆ ಅದ್ಭುತವಾಗಿಯೂ ಗಟ್ಟಿಯಾದ ಸಾಮಾನುಗಳಿಂದಲೂ ಮ್ಯಾಡಲ್ಟ್ಟಿಟ್ಟಿದ್ದ ಸರಿಯಾದ ಕಾಲವನ್ನು ತೋರಿಸುವುದು

ಸಿಕೆಟ್ ಲೀವರ್ ಗಡಿಯಾರ ರೂ. 5-0-0.
ಸಿಕ್ಕಲ್ ರೌಂಡ್ ರಿಸ್ಟ್‌ವಾಚ್
ಚಿಕ್ಕಳದ ಪಟ್ಟಿಸಹಿತ ರೂ. 5-8-0.
ನಿಕ್ಕಲ್ 4 ಮೂಲೆ ರಿಸ್ಟ್‌ವಾಚ್
ಚಿಕ್ಕಳದ ಪಟ್ಟಿಸಹಿತ ರೂ. 6-0-0.
ನಿಕ್ಕಲ್ 8 ಮೂಲೆ ರಿಸ್ಟ್‌ವಾಚ್
ಚಿಕ್ಕಳದ ಪಟ್ಟಿಸಹಿತ ರೂ. 7-0-0

ಮ್ಯಾನೆಜಿಂಗ್ ಏಜೆಂಟ್ಸ್—ಪೆಚ್ ಕೆ ಸಿಂಗ್ ಅಂಡ್ ಕೊ
ನಂ. 39 ಪರಮಾನಂದಮೊದಲಿ ಬೀದಿ,
ಎಸ್ಪ್ಲನೇಡ್ ಪೊಸ್ಟ್ ಮದರಾಸ್.

ಕಲಾಮಂದಿರಂ, ಬೆಂಗಳೂರು ಸಿಟಿ.

ನಮ್ಮಲ್ಲಿ ಎಲ್ಲಾ ವಿಧವಾದ ಪೆಯಿಂಟಿಂಗ್ ಎಕ್ಸ್‌ಲಾರ್ಜ್‌ಮೆಂಟು ಕೆಲಸಗಳೂ, ಚಿತ್ರಪಠಗಳನ್ನು ಬರೆಯುವುದು ಮುಂತಾದ ಕುಶಲವಿದ್ಯೆಗಳು ಉತ್ತಮ ರೀತಿಯಿಂದ ನಡೆಯುತ್ತವೆ. ಮತ್ತು ವಿದ್ಯಾರ್ಥಿಗಳನ್ನು ಕುಶಲವಿದ್ಯೆಗಳಲ್ಲಿ ತಯಾರ್ ಮಾಡುವೆವು. ಈ ಒಂದು ತಿಂಗಳವರೆಗೆ 15 12 ಸೈಜು ಎಕ್ಸ್‌ಲಾರ್ಜ್‌ಮೆಂಟ್ ಮಾಡುವುದಕ್ಕೆ ಕಮ್ಮಿ ಚಾರ್ಜು ಅಂದರೆ 12 ರೂಪಾಯಿಗೆ ಮಾಡಿ ಕೊಡುವೆವು. ಫೋಟೋ ಮತ್ತು ಅರ್ಧ ಹಣ ರವಾನಿಸಿ.

ಭಾರತ ಸರ್ವಸ್ವ

ಭಂಕಬಂಡದ ಪ್ರಖ್ಯಾತ ಕವಯಿತ್ರಿಯೂ ಉಜ್ವಲ ದೇಶಭಕ್ತೆಯೂ ಆದ ಶ್ರೀಮತಿ ಸರೋಜಿನೀದೇವಿಯವರ ಸುಪ್ರಸಿದ್ಧ ಪುಸ್ತಕವಾದ 'ಸೋಲ್ ಆಫ್ ಇಂಡಿಯ' ಎಂಬುವುದರ ಕನ್ನಡ ಪರಿವರ್ತನೆ ಕ್ರಯ 1 ಆಣೆ. ಬಂಗಾವರೆಲಾಣೆಯ ಸ್ಟಾಂಪನ್ನು ಕಳುಹಿಸಿದರೆ ಒಂದು ಪುಸ್ತಕ ಕಳುಹಿಸಲ್ಪಡುತ್ತದೆ

ವಿಳಾಸ—ಸತ್ಯವಾದಿ ಆಫೀಸ್ ಮೈಸೂರ

MYSORE GOVERNMENT
LOAN BONDS
&
SHARES OF PROMINENT
COMPANIES

BOUGHT & SOLD

For Particulars apply to
THE SEMAH ELISHA COMPANY
MYSORE

ಮೈಸೂರು ಸರ್ಕಾರಿ ಸಾಲದ ಪತ್ರ ಮತ್ತು ಕಂಪೆನಿ ಷೇರುಗಳನ್ನು ಕೊಂಡುಕೊಳ್ಳುತ್ತೇವೆ ಮತ್ತು ಬಿಕರಿ ಮಾಡುತ್ತೇವೆ.

ವಿಳಾಸ—ಸೇಮೂ ಇಲೈಷಾ ಕಂಪೆನಿ, ಮೈಸೂರು

೧೦೦೦ ರೂ ಪಾಯಿಗಳ ಬಹುಮಾನ

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬ

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು ತೆಗೆದುಕೊಳ್ಳಿರಿ

ಇದರ ಸೇವನೆಯಿಂದ ವೀರ್ಯವು ನೀರಿನಂತಿದ್ದರೂ ಸ್ವಪ್ನೇಂದ್ರಿಯ ವಾದರೂ ಸ್ತ್ರೀಸಂಗಕ್ಕೆ ಮೊದಲೇ ಸ್ಖಲನವಾದರೂ ಮೂತ್ರದೊಂದಿಗೆ ಹೋಗುತ್ತಿದ್ದರೂ, ದೇಹದಲ್ಲಿ ಶರೀರಕ್ಕೆ ದಾರ್ಢ್ಯವನ್ನೂ ಆರೋಗ್ಯವನ್ನೂ ಉಂಟುಮಾಡುವದು. ಅಜೀರ್ಣ, ಮಲಬದ್ಧತೆ, ವೆದು ಳಿನಬಲಹೀನತೆ, ಕೈಕಾಲು ಸೆಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ 'ಸಾಲಾಮಿಸ್ರಿ' ಎಂಬುವದು ಕಾಬೂಲ್ ಕಂದಹಾರಪ್ರಾಂತ್ಯಗಳಲ್ಲಿ ಬೆಳೆಯುತ್ತದೆ. ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕದೇವಗಳಿಂದಲೂ, ಆಫ್ರಿಕ ಬರ್ಮ ಪೀನಾಂಗ್ ಸಿಲೋನ್ ಮುಖ್ಯ ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರುದೇಕಾದರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ವಾಲಿಕ ಅದನ್ನು ಪಡೆಯಬಹುದು. 1 ಡಬ್ಬವನ್ನು 15 ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. 2 ಯಾ 3 ಡಬ್ಬಗಳು ಪೂರ್ಣವಾಗಿ ಗುಣವನ್ನುಂಟುಮಾಡುವವು. ಅನುಮಾನಪತ್ರಿಕೆಯು ಡಬ್ಬಿಸಂಗಡಲೇ ಇರುತ್ತೆ. ಹೆಸರು ವಿಳಾಸ ಜೆನ್ನಾಗಿ ತಿಳಿಯುವಂತೆ ಇರಬೇಕು

ಕ್ರಯ ಡಬ್ಬಿ 1 ಕ್ಕೆ ರೂ. 2—0—0 ಟಪ್ಪಾಲು ಖರ್ಚಿಗಾಗಿ 3 ಡಬ್ಬಿಗಳಿಗೆ 4 ಆಣೆ ಏಜೆಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯಕವಾಗಿ ಬೇಕಾಗಿರುತ್ತೆ. ರೂಲ್ಸ್ ತರಿಸಿ ನೋಡಿಕೊಳ್ಳಬಹುದು.

ಟೆಲಿಗ್ರಾಫ್ ಅಡ್ರೆಸ್—ಮಿಸ್ರಿ, ಬೆಂಗಳೂರು ಸಿಟಿ

ವಿಳಾಸ ಡಿ. ಮನ್ನಾಲಾಲ್, ಡೆಲ್ಲಿ ವೈದ್ಯರು,
ಸಾಲಾಮಿಸ್ರಿ ಮುರಬ್ಬಾ ಡಿಪೋ,
ಬೆಂಗಳೂರು ಸಿಟಿ

ಶೃಂಗೇರಿ ಜಗದ್ಗುರುಗಳವರು ಕರೂರಿಗೆ ದಯಮಾಡಿಸಿರುವುದಾಗಿ ತಿಳಿಯಬಂದಿದೆ.

—

ನ್ನು ಅನ್ವೇಷಣೆಯ ಸಲುವಾಗಿ ದೇಶಬಂಧು ಫಾರ್‌ವರ್ಡ್ ಪತ್ರಿಕೆಯ ಸಂಪಾದಕ ರಾಜೇನಾಮೆ ಕೊಡತಕ್ಕನಂತಿರುವ ರ್ಮನಿಯಿಂದ ವಾಪಸ್ ಬಂದಿರುವ ಬಿನಾಯಕ ಕುಮಾರ್ ಸೆಕ್ಕಾರ್‌ರವರು ಗುವರಂದೂ ಡೇಲಿಮೇಲ್ ಪತ್ರಿಕೆ ಯು ಬಂದಿದೆ.

—

ಸಾಸ್ ಬೀಚ್ ಸ್ಟೇಷನ್‌ಮಾಸ್ಟರು ಒಂ ಸ ಆಫೀಸಿನಲ್ಲಿ ಸೇರಿದ್ದ 274 ರೂಪಾ ಹೆಡ್ಡಾಪೀಸಿಗೆ ಕಳುಹಿಸಿದುದಕ್ಕಾಗಿ ಟಿಕೀಟು ಕೊಡತಕ್ಕ ಗುಮಾಸ್ತನೂ ಸ್ಪೆಂಷುಮಾಡಲ್ಪಟ್ಟಿದ್ದಾರೆ.

ತಿರು ಜನಾವಳಿಯಿಂದ ಅರೋಡಿಗೆ ಇರುವ ರೈಲ್ವೆ ಲೈನ್‌ನ್ನು ಮೀಟರ್ ಗೇಜಿನಿಂದ ಬ್ರಾಡ್ ಗೇಜಿಗೆ ಬದಲಾಯಿಸುವ ಏರ್ಪಾಡು ನಡೆಯುತ್ತಿದೆ.

—

ಅಮೆಗಳಿಂದ ಒಂದು ವಿಧವಾದ ಔಷಧವನ್ನು ತೆಗೆದು ಅದನ್ನು ರಕ್ತಕ್ಕೆ ಸೂಜಿಯಿಂದ ಜುಚ್ಚಿ ಸೇರುವಂತೆಮಾಡಿದಲ್ಲಿ ಕ್ಷಯರೋಗ ನಿವಾರಣೆಯಾಗುವದೆಂದು ಒಬ್ಬ ಜರ್ಮನ್ ವೈದ್ಯನು

'ಸತ್ಯವಾದಿ'

—o—

ಗುರುವಾರ 5 ನೆ ಫೆಬ್ರವರಿ 1925

ರಾಟೆಯ ಸಂದೇಶ.

ನೂಲು ರಾಟೆಯ ಸಂದೇಶವು ಹಳ್ಳಿಗಳಲ್ಲಿನ ಸಣ್ಣಸಣ್ಣ ಮನೆಗಳಿಗೇ ಅಲ್ಲದೆ ಮಹಾರಾಜರ ಮಂದಿರಗಳಲ್ಲೂ ವ್ಯಾಪಿಸಿರುವುದು ಅಧಿಕ ಸಂತೋಷಾಸ್ಪದವು. ಮಹಾತ್ಮಗಾಂಧಿಯವರ ವಿನ್ನಹವು ಧನಾಧಿಕಾರ ಸಂಪತ್ತುಗಳಲ್ಲಿ ಕೃದಯಗಳನ್ನು ಸೆಳೆಯಲಿಕ್ಕಾಗಿಯೇ ಪ್ರಭಾ ಶಂಕರಪಡಾನೀಯವರು ನೂಲು ತೆಗೆಯುವುದಕ್ಕೆ ಮಹಾತ್ಮರಿಗೆ ವಾಗ್ದಾನವನ್ನು ಮಾಡಿದ ದಿವಸವೇ ರಾಟೆಯ ಸಂದೇಶವು ಅತಿ ತೀಕ್ಷ್ಣವಾಗಿ ವ್ಯಾಪ್ತಿಯಾಗುವುದೆಂದು ಊಹಿಸಿದೆವು. ಭೂಪಾಳದ ಬೇಗಂರವರು ಖುದ್ದು ನೂಲು ತೆಗೆಯುತ್ತಿರುವಂತೆ ಶ್ರೀಮತಿ ಸರೋಜಿನಿನಾಯ್ಡುರವರು ಸೂಚಿಸಿದ್ದರು ನಿನ್ನೆದಿವಸ ಪ್ರಜುರನಾದ ವಾರ್ತಾಪ್ರಕಾರವಾಗಿ, ಮೈಸೂರು ರಾಜಕುಟುಂಬದಲ್ಲಿನ ಮುಖ್ಯಸ್ಥರು ಕೆಲವರು ನೂಲುತ್ತಿರುವಂತೆ ತಿಳಿಯಿತು. ಮೈಸೂರು ಮಹಾರಾಜರವರೇ ನಿತ್ಯವಿಧಿಯಂತೆ ನೂಲು ತೆಗೆಯುತ್ತಿರುವಂತೆ ತಿಳಿಯಬಂದಿದೆ ಅಗರ್ಭ ಶ್ರೀಮಂತರಾದ ಇಂಥಾ ಮಹಾರಾಜರುಗಳೇ ಖುದ್ದಾಗಿ ರಾಟೆಯನ್ನು ತಿರುಗಿಸಿ ನೂಲನ್ನು ತೆಗೆದು ಮಾರ್ಗದರ್ಶಿಗಳಾಗುವುದು ಹೆಚ್ಚು ಪ್ರಯೋಜನವನ್ನುಳಿಟುಮಾಡುವುದು. ರಾಟೆಯನ್ನು ತಿರುಗಿಸುವುದು ವಾಶ್ಚಾತ್ಯರ ದೃಷ್ಟಿಯಲ್ಲಿ ಹಾಸ್ಯಾಸ್ಪದವಾಗಿದ್ದರೂ, ಭಾರತೀಯರ ಆರ್ಯ ಸಂಪ್ರದಾಯಕ್ಕೆ ಅದು ವಿರುದ್ಧವಾಗಿರುವುದಿಲ್ಲ.

ಬಡವರೂ ಭಾಗ್ಯವಂತರೂ ತಮ್ಮ ಧರ್ಮಗಳನ್ನು ಮತೆತು ನನ್ನ್ರಾಗಳಿಗೆ ವಿದೇಶದ ಸ್ತ್ರೀವರುಗಳ ನೇಲೆ ಆಧಾರವಾಗಿರುವಲ್ಲಿ, ಪುನಃ ಈ ಪರಿಶ್ರಮವನ್ನು ಪುನರುದ್ಧರಿಸಿದುದು ಎಲ್ಲರಿಗೂ ಅತ್ಯಂತಾವಶ್ಯಕವು. ಇದರಲ್ಲಿ ನೂತನವಾದ ಚಮತ್ಕಾರವೇನೂ ಇಲ್ಲ. ವಿದೇಶೀ ವಸ್ತ್ರ ಬಹಿಷ್ಕಾರವು ಸ್ವರಾಜ್ಯಸ್ಥಾಪನೆಗೆ ಮೂಲಾಧಾರವೆಂದು ಚಿರಕಾಲದಿಂದ ಭಾರತೀಯನಾಯಕರು ಒತ್ತಿ ಒತ್ತಿ ಸಾಯುತ್ತಲೇ ಇರುವರು. ಮಹಾತ್ಮರು ಇಂಥಾ ಸಿದ್ಧಾಂತವನ್ನು ಆಚರಣೆಗೆ ತರುತ್ತಿರುವಲ್ಲಿ ಸ್ವರಾಜ್ಯವನ್ನಾಸಿನುವವರೆಲ್ಲರೂ ಮಹಾತ್ಮರಿಗೆ ಸಹಾಯಮಾಡುವುದು ಅಗತ್ಯವಾದುದಲ್ಲವೇ? ಶ್ರೇಷ್ಠರು ಅವುದನ್ನು ಆದರಿಸುವರೋ ಪ್ರಜೆಗಳು ಅದನ್ನು ಅನುಸರಿಸುವರು. ಇದು ಮಾನವ ಸ್ವಭಾವವು. ಈ ಪ್ರಕಾರವಾಗಿ ನಾಯಿಕರೆನ್ನು ಪರಿಗಣಿಸುವವರೆಲ್ಲರೂ ರಾಟೆಯನ್ನು ತಿರುಗಿಸುವುದು ಅವರ ನಿತ್ಯಕರ್ಮವೆಂದು ಭಾವಿಸುವುದು ಅವಶ್ಯಕವಲ್ಲವೇ? ಇನ್ನು ಮೇಲೆ ಇಸ್ಪೀಟ್ ಕಜೇರಿಗಳ ಬದಲಾಗಿ ರಾಟೆಯ ಸಂಘಗಳನ್ನು ಸ್ಥಾಪಿಸುವುದು ಲಾಭಕರವು. ವಿಶ್ರಾಂತಿ ಕಾಲದಲ್ಲಿ ವಿದ್ಯಾಧಿಕರು ಸುಮ್ಮನೆ ಕಳೆಯುತ್ತು ಕಾಲಹರಣಮಾಡುವ ಬದಲು ರಾಟೆಯನ್ನು ತಿರುಗಿಸುತ್ತ ಶರೀರ ಪರಿಶ್ರಮವನ್ನು ಮಾಡೋ ವಿಶ್ರಾಂತಿಯನ್ನೂ, ಸ್ವಾತಂತ್ರ್ಯಾಭಿಮಾನವನ್ನೂ ವೃದ್ಧಿಗೊಳಿಸುವಂತಾಗುವುದರಲ್ಲಿ ಸಂದೇಹವಿಲ್ಲ ಸಂಪೂರ್ಣ ಸ್ವರಾಜ್ಯಪ್ರಾಪ್ತಿಗೆ ಇದರಲ್ಲಿ ಅಧಿಕ ಪ್ರೋದ್ಬಲವು ಉಂಟಾಗುವುದು. ಇಂಥಾ ಸಂಘಗಳಿಗೆ ಜಾತಿ ಮತ ಭೇದಗಳಿಲ್ಲದೆ ಎಲ್ಲರನ್ನೂ ಬರುವಂತೆ ಮಾಡುವುದರಿಂದ ಅಸ್ಪೃಶ್ಯತಾ ನಿವಾರಣೆಯು ನೆರವೇರಿದಂತಾಗುವುದು.

ಆ. ಪ ಅನುಪಾದ.

ಮತ್ತೊಂದು ಸಮಾವೇಶವು.

ಮತ್ತೊಂದುಸಂಯುಕ್ತಸಂಸ್ಥಾನಗಳ ಸಮಾವೇಶನವನ್ನು ಸ್ಥಾಪಿಸಬೇಕೆಂದು ಅಮೇರಿಕದ ಸೆನೆಟ್ ಸಭೆಯವರು ತೀರ್ಮಾನವನ್ನು ಮಾಡಿರುವರು. ಇಂಥ ಸಮಾವೇಶಕ್ಕೆ ಇನ್ನೂ ತರುಣವು ಉಂಟಾಗಲಿಲ್ಲವೆಂದು ಅಧ್ಯಕ್ಷರಾದ ಕೂಲಿಡ್ಜ್‌ರವರು ಸೂಚಿಸಿದ್ದರು. ಇಂಥಾ ಸ್ಥಿತಿಯಲ್ಲಿ ಎರಡನೆಯ ಸಮಾವೇಶವು ನಡೆಯುವುದೇ? ಪೃಥ್ವಿಯಲ್ಲಿ ಯುದ್ಧಸಾವಗ್ರಿಯನ್ನು ಕಡ್ಡಿಸುವುದೇ ಈ ಸಭೆಯ ಮುಖ್ಯೋದ್ದೇಶವು. ಪ್ರಥಮ ಮಾಹಿಂಗ್ಟನ್ ಸಮಾವೇಶವು ವಿಫಲವಾಯಿತೆಂದು ತಿಳಿಯಬಹುದು. ಕಾರಣವೇನು? ದೊಡ್ಡ ರಾಷ್ಟ್ರಗಳೀವಿಷಯದಲ್ಲಿ ಸಣ್ಣ ರಾಷ್ಟ್ರಗಳಿಗೆ ಮಾರ್ಗದರ್ಶನವನ್ನು ತೋರಿಸಬೇಕಾಗಿರುವಲ್ಲಿ ಹಾಗೆ ಮಾಡದೆ ಇದ್ದುದರಿಂದಲೇ ಅನರ್ಥಗಳು ಅಧಿಕವಾದುವು ಸಭೆಗಳೂ, ಸೆನ್ಮೇಳನಗಳೂ ಹೆಚ್ಚುತ್ತಿದ್ದರೂ, ಕಾರ್ಯತಃ ವಿಶೇಷ ಫಲದಾಯಕವಾಗಿಲ್ಲ. ರಾಷ್ಟ್ರಗಳ ಹೃದಯಗಳಿನ್ನೂ ಒಂದಾಗಲಿಲ್ಲ. ವಾತ್ಸಲ್ಯೈಷವ್ಯಗಳಿನ್ನೂ ತೊಲಗಲಿಲ್ಲ. ಪ್ರತಿ ದೇಶವೂ ತನ್ನ ಸುಖವನ್ನು ನೋಡಿಕೊಳ್ಳುವುದೇ ಪುನಃ ಇತರರ ಸುಖಗಳನ್ನು ಕುರಿತು ವಿಚಾರಿಸುವುದಿಲ್ಲ. ಪ್ರತಿ ಜಾತಿಗೂ ಸ್ವಯಂ ನಿರ್ಣಯಾಧಿಕಾರವನ್ನು ಕೊಡುವುದಕ್ಕೂ, ಪರಾಧೀನತೆಯನ್ನು ನಿವಾರ್ತಿಸುವುದಕ್ಕೂ ಪ್ರಯತ್ನವು ನಡೆಯಿಸೇ ಹೊರತು ಪ್ರಪಂಚದ ಶಾಂತಿ ಶಾಶ್ವತವಾಗುವುದಕ್ಕೆ ಸಹಾಯವಾಗಲಿಲ್ಲ. ವಿಲ್ಸನ್ ಮಹಾಶಯನು ಮೊದಲು ಈ ಸತ್ಯವನ್ನು ವಿಶದಪಡಿಸಿದನೇ ಹೊರತು ಅದನ್ನು ಸಂಧಿಸಕ್ರದಲ್ಲಿ ಕಾಣಿಸಲಿಲ್ಲವು. ವರ್ಸೈಲ್ಸ್ ಸಂಧಿಯು ಪ್ರಪಂಚದ ದುಃಖವನ್ನು ಹೆಚ್ಚಿಸುವುದಕ್ಕೆ ಸ್ವಯಂನಿರ್ಮಾಣಸೂತ್ರವಿಲ್ಲದಿರುವಿಕೆಯೇ ಕಾರಣವು ಈ ಸಲವಾದರೂ ಅಂಥ ಪ್ರಯತ್ನವು ನಡೆಯುವುದೇ? ನಡೆದರೂ ಸಫಲವಾಗವೇ? ಇಂಗ್ಲೆಂಡ್, ಫ್ರಾನ್ಸ್, ಇಟಲಿ ಮೊದಲಾದ ದೇಶಗಳು ತಮ್ಮ ಪರಿಪಾಲನೆಗಳ ಕೆಳಗೆ ಇರುವ ರಾಷ್ಟ್ರಗಳಿಗೆ ಸ್ವಾತಂತ್ರ್ಯವನ್ನು ಕೊಡುವೆನೆಂದು ಊಹಿಸುವುದು ಕಷ್ಟವು. ಮ್ಯಾಂಡೇಟ್‌ಗಳೆಂಬ ಹೆಸರಿನಲ್ಲಿ ಹೆಚ್ಚು ಭೂಮಿಗಳು ಇವರ ಕೈವಶವಾದುವು. ಪ್ರಪಂಚದ ಕಲ್ಯಾಣಕ್ಕಾಗಿ ಸ್ವಾರ್ಥವನ್ನು ತ್ಯಜಿಸುವುದಕ್ಕೆ ಈ ದೊಡ್ಡ ರಾಷ್ಟ್ರ ಗಳು ಪ್ರಯತ್ನಮಾಡಿದುದೇ ವಿನಾ ಅನುಕೂಲ ಫಲಿತವಿಲ್ಲವು' ಮತ್ತೊಂದು ಸಮಾವೇಶವನ್ನು ನಡೆಸುವದು ಕಷ್ಟವಲ್ಲ. ಪುನಃ ತೀರ್ಮಾನಗಳನ್ನು ಮಾಡುವದು ಸಾಧ್ಯವಾದುದೇ ವಿನಾ ಯಾವ ಉದ್ದೇಶ್ಯದಿಂದ ಈ ಸಭೆಗಳು ನಡೆಯುವುವೋ ಅದು ನೆರವೇರುವದು ಮಾತ್ರ ದುರ್ಲಭ. ಜಿನೀವಾದಲ್ಲಿ ಯುದ್ಧನಿವಾರಣೆಮಾಡಿದ ಒಡಂಬಡಿಕೆಯನ್ನು ಮುಂದೆಲೆಗೆ ತಳ್ಳಿದರು. ಮಿಕ್ಕ ಒಡಂಬಡಿಕೆಗಳು ಮಾತ್ರ ಸಫಲವಾಗುವವೇ? ಇವು ಸಫಲವಾಗಬೇಕಾದರೆ ಕೇವಲ ಭೌತಿಕ ದೃಷ್ಟಿಯನ್ನು ಬಿಟ್ಟು ಪಾರಮಾರ್ಥಿಕ ದೃಷ್ಟಿಯಿಂದ ನಡೆದರೆ ಮಾತ್ರ ನೆರವೇರುವುದು.

ಮೃತ್ಯುಂತಸಂಗ್ರಹ

ಬೊಂಬಾಯಿನ ಘೋರ ಅತ್ಯಾಚಾರಕ್ಕೆ ಕಾರಣಭೂತಳಾದ ಮರೆತಾಜ್' ಬೇಗಂ ಇನ್ನೂ ಪೋಲೀಸು ಉಸ್ತುವಾರಿಯಲ್ಲಿಯೇ ಇದಾಳೆ.

—

ಬಾವ್ಲಾವರ್ ತಾಯಿಯು ಖೂನಿಮಾಡಿದ ದುರಾತ್ಮರಲ್ಲಿ ಒಬ್ಬರನ್ನು ಅತಿ ಸಾಹಸದಿಂದಲೂ ತನ್ನ ಪ್ರಾಣದವೇಲೆ ಆಸೆಯನ್ನು ಬಿಟ್ಟು ಹಿಡಿದ ಕ್ಯಾಪ್ಟನ್ ಸೆಗ್ರೆಟ್‌ರವರಿಗೆ 5 ಸಾವಿರ ರೂಪಾಯಿಗಳನ್ನು ಬಹುಮಾನವಾಗಿ ಕಳುಹಿಸಿದ್ದರು. ಕ್ಯಾಪ್ಟನ್ನರು ಅದನ್ನು ಸ್ವೀಕರಿಸದೆ ವಾಪಸ್ ಮಾಡಿ ತಾನು ತನ್ನ ಕರ್ತವ್ಯವನ್ನು ಮಾತ್ರ ಮಾಡಿದೆನೆಂದೂ, ಬಹುಮಾನಪಡೆಯುವಷ್ಟಕ್ಕೆ ಅಂತಹ ಬಹುದೊಡ್ಡ ಕಾರ್ಯವೇನನ್ನೂ ಮಾಡಿಲ್ಲವೆಂದು ತಿಳಿಯಪಡಿಸಿರುತ್ತಾರೆ.

—

ಬೊಂಬಾಯಿನಲ್ಲಿ ಖೂನಿಯಾದ ಬಾವ್ಲಾವರ ಸೆಕ್ರೆಟರಿ ಮಾಧ್ಯುರವರು ಈಗ ಗುಣಹೊದಿ ಆಸ್ಪತ್ರೆಯಿಂದ ಬಿಡುಗಡೆ ಹೊಂದಿದಾರೆ. ಇವರು ಈ ಅತ್ಯಾಚಾರದ ಸಂಬಂಧದಲ್ಲಿ ಇಂದಿನವರೆಗೆ ಹಿಡಿಯಲ್ಪಟ್ಟಿರುವ ಆಪಗಾಧಿಗಳನ್ನು ಗುರ್ತಿಸಲು ಸಲುವಾಗಿ ಇಂದೂರಿಗೆ ಹೊರಡುವರಂತಾಗಿದ್ದಾರೆ.

—

ಬೊಂಬಾಯಿ ಕ್ರಾನಿಕಲ್ ಪತ್ರಿಕೆಯನ್ನು ಬೇರೆ ಸಂಘದವರು ನಡೆಸುವವರಾಗಿದಾರೆ. ಈ ಸಂದರ್ಭದಲ್ಲಿ ವಾಯ್ಸ್ ಆಫ್ ಇಂಡಿಯಾ ಪತ್ರಿಕೆಯ ಮೂಲೀಕರಾದ ಮಿ॥ ದೆಳಗಾಂವಾಲರವರು 1 ಲಕ್ಷ 20 ಸಾವಿರ್ ರೂಪಾಯಿಗಳನ್ನು ಅಡ್ವಾನ್ಸ್‌ಗಾಗಿ ಪಾವತಿಮಾಡಿ ತನ್ನ ಸಂಘದವರನ್ನು ನೋಡಿಕೊಳ್ಳುವಂತೆ ಕೇಳಿಲು ಹೇಳಿದಾರೆ. ಇವರು ಜಿನೆವಾದಲ್ಲಿ ನಡೆದ ವಿಂಟರಿಂಗಿನಲ್ಲಿ ಒಪ್ಪಿದಾರೆ ಮುಂದೆ ಬೊಂಬಾಯಿ ಕ್ರಾನಿಕಲ್ಲಿಗೆ ಇವರೆ ಮ್ಯಾನೇಜಿಂಗ್ ಪ್ರೊಪ್ರೈಟರ್‌ರಾಗಿರುತ್ತಾರೆಂದೂ ತನ್ನ ಪತ್ರಿಕೆಯನ್ನು ನಿಲ್ಲಿಸಿ ಅದನ್ನು ಇದರೊಡನೆ ಸೇರಿಸಿ ತ್ತಾರೆಂದು ತಿಳಿಯಬಂದಿದೆ.

—

ಶ್ರೀಮಾನ್ ಮಹಾರಾಜರು, ಯೂರೋಪ್ ದೇಶ ಸಂಚಾರವನ್ನು ನಿಲ್ಲಿಸಿರುತ್ತಾರೆ.

ಸರ್ಕಾರೀ ಆಡಳಿತಗಳ ಗೋಷ್ಠಾರೆ.

[ಪಬ್ಲಿಸಿಟಿ ಆಫೀಸಿನಿಂದ]

1924 ನೆಯ ಇಸವಿ ಸೆಪ್ಟಂಬರ್ 15 ನೆಯ ಮಳ್ಳಾವಿನ ಒಂದು ಗುಪ್ತಾವಿನಲ್ಲಿ ಸರ್ಕಾರದ ವಿವಿಧ ಸಂಸ್ಥಾನದಲ್ಲಿರುವ ಮಿನಿಸ್ಟರ್ ಕೌನ್ಸಿಲುಗಳಿಗೂ ಲೋಕಲ್ ಗವರ್ನಮೆಂಟುಗಳಿಗೂ ತಮ್ಮ ತಮ್ಮ ನೌಕರರುಗಳಿಗೆ ಬಹು ಸ್ವಂತ ಕಾರಣದಿಂದ ಮನೆಗಳನ್ನು ಕಟ್ಟಿಕೊಳ್ಳುವಕ್ಕಾಗಿ ಮುಂಗಡಗಳನ್ನು ಕೊಡುವುದಕ್ಕೆ ಅಧಿಕಾರವನ್ನು ಕೊಟ್ಟರು. ಈ ವಿಷಯವನ್ನು ಕುರಿತು ಮೈಸೂರು ಪರ್ಯಾಲೋಚನಸಭೆಗೆ ನಿರೀಕ್ಷಣೆಯಲ್ಲಿ ಈ ಪ್ರಸ್ತಾವನ್ನು ಸಭ್ಯಕ್ಕೆ ಒದ್ದುಮಾಡಿದೆ.

—

ಸಂಜನಗೂಡು ಚಾಮರಾಜನಗರ ರೈಲ್ವೆ ರೈತರಿಗಾಗಿ ಕೇಳಿರುವ ಸೇಕಡಾ 2 ರೂಪಾಯಿಗಳ ಮೇಲೆ ಬಡ್ಡಿಯು ಸಲ್ಲತಕ್ಕ ಡಿಬೆಂಚರ್ ಸಾಲದ ಪೈಕಿ 7 ಲಕ್ಷ ರೂಪಾಯಿಗಳು ಈಗಾಗಲೇ ಜಂಟಿ ಮೂಲ್ಕ ವಸೂಲಾಗಿದೆ. ಇನ್ನು ಒಂದು ಲಕ್ಷ ರೂಪಾಯಿಗಳಿಗೆ ಮಾತ್ರ ಜಂದಾ ಹಣವು ದೊರೆಯಬೇಕಾಗಿದೆ.

—

ಕನ್ನಡದಲ್ಲಿ ಒಂದು ಅರ್ಥಸಾಧಕ ಪತ್ರಿಕೆಯನ್ನು ಅದರ ಕೆಲವು ಪ್ರತಿಗಳಿಗೆ ಸರ್ಕಾರದವು ಜಂದಾದಾರರಾಗುವೆವೆಂಬ ಒಪ್ಪಂದದ ಮೇಲೆ ಪ್ರಕಟಪಡಿಸುವ ಕೆಲಸವನ್ನು ಕೈಗೊಳ್ಳುವುದಕ್ಕೆ ಇಷ್ಟಪಡುವ ಜನರು ತಮ್ಮ ದರಖಾಸ್ತುಗಳನ್ನು ಸರ್ಕಾರದವುಗೆ ಕಳುಹಿಸಬಹುದೆಂದು ಕೋರಲಾಯಿತು. ಈ ಹುಕುಮ್ಮಿಗೆ ಅನುಸಾರವಾಗಿ 21 ದರಖಾಸ್ತುಗಳು ತಲಪಿದವು. ಸರ್ಕಾರದವರು ಅವುಗಳೆಲ್ಲವನ್ನೂ ಕೂಲಂಕಷವಾಗಿ ಪರೀಕ್ಷಿಸಿ, ಒಕ್ಕಲಿಗರ ಪತ್ರಿಕೆಯ ಸಂಪಾದಕರಾದ ಮಿ|| ಹನುಮಂತಯ್ಯ ಗೌಡರಿಗೆ ಕೆಲವು ಷರತ್ತುಗಳ ಮೇಲೆ ಸದರಿ ಕೆಲಸವನ್ನು ವಹಿಸಬೇಕೆಂದು ತೀರ್ಮಾನಿಸಿರುತ್ತಾರೆ.

—

ಮೈಸೂರು ಸಂಸ್ಥಾನದಲ್ಲಿರುವ ವ್ಯವಸಾಯದ ದಾಸರುಗಳ ಅರನೆಯ ಪಾಂಡ-ವಾರ್ಷಿಕ ಖಾನೇಷುಮಾರಿಯನ್ನು 1925 ನೆ ಇಸವಿ ಮಾರ್ಚ್ ಮತ್ತು ಏಪ್ರೆಲ್ ತಿಂಗಳಲ್ಲಿ ನಡೆಸಕ್ಕದ್ದೆಂದು ಸರ್ಕಾರದವರು ಆಜ್ಞಾಪಿಸಿರುತ್ತಾರೆ.

—

ಮುಂದಿನ ಅಕ್ಟೋಬರಿಂದ ವ್ಯಾಲ್ಯುಯೇಷನ್ ಫಲಿತಾಂಶಗಳು ತಿಳಿಯುವವರೆಗೂ ಸಂದರ್ಭದಲ್ಲಿ ಜೀವವಿಮೆಯ ಏಜೆಂಟರು ಪ್ರಜೆಗಳಲ್ಲಿ ಸ್ತ್ರೀಯರ ಜೀವವಿಮೆಯನ್ನು ಆಂಕಸಕೊಡದೆಂದು ಸಂಸ್ಥಾನದ ಲೈಫ್ ಇನ್ಷೂರೆನ್ಸ್ ಕಮಿಟಿಯವರು 1924 ನೇ ಇಸ್ವಿ ಡಿಸೆಂಬರ್ 20 ನೇ ತಾರೀಖಿನಲ್ಲಿ ನಡೆದ ಮೀಟಿಂಗಿನಲ್ಲಿ ಅನುಮೋದಿಸಿದ ನಿರ್ಣಯವನ್ನು ಸರ್ಕಾರದವರು ಅನುಮೋದಿಸಿರುತ್ತಾರೆ.

—

ಎರಡು ತಿಂಗಳುಗಳಿಗೆ ಮೇಲ್ಪಟ್ಟು ವಿಲೆಯಾಶೇಕದಾರರ ವಶದಲ್ಲಿರುವ ಕಾಗದಪತ್ರಗಳ ಪಟ್ಟಿಯನ್ನು ಹದಿನೈದು ದಿನಗಳಿಗೆ ಒಂದಾವರ್ತಿ ತಯಾರ್ಮಾಡುವದಕ್ಕೆ ತಗಲುವ ವಿಶೇಷವಾದ ಖರ್ಚುವೆಚ್ಚಗಳನ್ನೂ ಕಾಲವಿಳಂಬನವನ್ನೂ ತಪ್ಪಿಸುವ ಬಗ್ಗೆ ರೆವಿನ್ಯೂ ಕಮಿಷನರವರು ಅಂಥಾ ಕಾಗದಪತ್ರಗಳ ಸಮಗ್ರವಾದ ಪಟ್ಟಿಗಳನ್ನು 3 ತಿಂಗಳಿಗೊಂದುಸಾರಿ ಆಯಾತಿಂಗಳ ಮೊದಲನೆ ವಾರದಲ್ಲಿ ಕಳುಹಿಸುವಂತೆಯೂ, ಮತ್ತೆ ಹದಿನಾಲ್ಕು ದಿನಗಳಿಗೆ ಒಂದು ಸಲದಂತೆ ಅಕಾಲದಲ್ಲಿ ಪೈಸಲಾದ ಹೊಸದಾಗಿ ಒಂದು ಕಾಗದಪತ್ರಗಳ ಜಂಬರ ಸಂಬರುಗಳನ್ನು ತೊಡಗಿಸಕ್ಕೆ ಸಂಕ್ಷೇಪವಾದ ಟಿಪ್ಪಣಿಗಳನ್ನು ಬರೆದು ಕಳುಹಿಸುವಂತೆಯೂ ಶೇಕದಾರರಿಗೆ ಅಪ್ಪಣೆಯನ್ನು ಕೊಡಬಹುದೆಂದು ಸಲಹೆಮಾಡಿರುತ್ತಾರೆ. ಅಲ್ಲದೆ, ಮೂರು ತಿಂಗಳಿಗೊಮ್ಮೆ ಕಳುಹಿಸಕ್ಕ ಪಟ್ಟಿಗಳು ತಾಲ್ಲೂಕು ಕಚೇರಿಗಳಲ್ಲಿ ತನಿಖೆಯಾಗಿ ಸಬ್ ಡಿವೀಜನ್ ಅಧೀನದ ಸರ್ಕಾರಿಗಳಿಂದ ವಿಮರ್ಶಿಸಲ್ಪಡಬೇಕೆಂದೂ ಅವರು ಸಲಹೆಮಾಡಿರುತ್ತಾರೆ. ಸರ್ಕಾರದವರು ಹಾಲಿ ಜಾರಿಯಲ್ಲಿರುವ ಹುಕುಂಗಳನ್ನು ರದ್ದುಮಾಡಿ ಮೇಲ್ಕಂಡ ಸಲಹೆಯನ್ನು ಅಂಗೀಕರಿಸಿರುತ್ತಾರೆ.

ಇಂಗ್ಲೆಂಡಿನಿಂದ ಇಂಡಿಯಾಕ್ಕೆ ವಿಮಾನದಲ್ಲಿ ಸಂಚಾರವನ್ನು 1927 ರಲ್ಲಿ ಆರಂಭಿಸುವುದೆಂದೂ ಒಂದು ವಿಮಾನದಲ್ಲಿ 300 ಜನರು ಪ್ರಯಾಣಮಾಡಬಹುದೆಂದೂ ವರ್ತಮಾನವಿದೆ.

—

ಟರ್ಕೀ ಸರ್ಕಾರದವರು ಒಂದು ಕಾಯಿದೆಯ ಮೂಲ್ಕ 18 ರಿಂದ 60 ವರ್ಷದೊಳಗಿನ ಗಂಡಸರು ವರ್ಷಂಪ್ರತಿ 6 ರಿಂದ 12 ದಿವಸಗಳವರೆಗೆ ಕಡಮೆ ಇಲ್ಲದಂತೆ ಶಸ್ತ್ರಾಭ್ಯಾಸನಡೆಸಬೇಕೆಂದು ನಿರ್ಣಯಿಸಿರುವರು.

—

ಕಳೆದವಾರ ತಿರುಪತಿಯಿಂದ ಮದ್ರಾಸಿಗೆ ಟಿಕೀಟಿಲ್ಲದೆ ಒಬ್ಬನು ರೈಲಿನಲ್ಲಿ ಪ್ರಯಾಣಮಾಡುತ್ತಿದ್ದು, ತಾನು ಇಳಿಯಬೇಕಾದ ಸ್ಟೇಷನ್ ಹತ್ತಿರವಾಗಲು, ಟಿಕೀಟಿಲ್ಲದಿರುವುದು ಪತ್ತೆಯಾದೀತೆಂಬ ಶಂಕೆಯಿಂದ ರೈಲಿನಿಂದ ಧುಮಕಿದನು. ಎಷ್ಟೇತ ಎಟು ತಗಲಿ ಕೂಡಲೆ ಪ್ರಾಣಬೀಯಿತು. ಟಿಕೀಟಿಲ್ಲದೆ ರೈಲಿನಲ್ಲಿ ವೇಷವಿಂದ ಪ್ರಯಾಣಮಾಡಿ, ಅನಾಹುತಗಳಿಗೆ ಈಡಾಗುತ್ತಿರುವವರಿಗೆ ಇದು ಒಂದು ಪಾಠ.

—

ಚಿತ್ರದುರ್ಗದ ಅಂಜವಳನಿಮುಷಿದುಲ್ ಇಸ್ಲಾಂ ಸಂಘದವರ ವ್ಯಾರ್ಥನೆಯ ಮೇರೆ, ಮತ್ತು ಆ ಡಿಸ್ಟ್ರಿಕ್ಟಿನ ಡೆಪ್ಯುಟಿಕಮಿಷನರವರ ಶಿಪಾರಸಿಗನುಸಾರವಾಗಿ ಮಹಮದೀಯ ಪಂಗಡದ ಪ್ರಾತಿನಿಧ್ಯದ ಬಗ್ಗೆ ಸದರಿ ಸಂಘವನ್ನು ಸರ್ಕಾರದವರು ಅಂಗೀಕರಿಸಿದಾರೆ.

—

ಅಲಿಪುರದ ಜೈಲಿನಲ್ಲಿಡಲ್ಪಟ್ಟಿದ್ದ ಸೆಬೋಸ್ ಚಂದ್ರಬೋಸ್ ಮುಂತಾದ 5 ಜನರು ರಂಗೂನಿಗೆ ಸಾಗಿಸಲ್ಪಟ್ಟಿರುವರೆಂದು 'ರಂಗೂನ್ ಮೇಲ್' ತಿಳಿಸುತ್ತದೆ.

ತಿರುಜನಾಪಳ್ಳಿಯಲ್ಲಿ ನಡೆದ ಉಪಧ್ಯಾಯರ ಸಮ್ಮೇಳನದಲ್ಲಿ ಮದ್ರಾಸ್ ಸರ್ಕಾರದವರು ಕೂಡಲೆ ತಿರುಜನಾಪಳ್ಳಿಯಲ್ಲಿ ಒಂದು ತಮಿಳು ವಿಶ್ವವಿದ್ಯಾಲಯವನ್ನು ಸ್ಥಾಪಿಸಬೇಕೆಂದು ತರಾವಾಯಿತು.

—

ರಾಜದ್ರೋಹಕರವಾದ ಪ್ರಕಟನೆ ವುಸ್ತಕಗಳು ಲಾಹೋರ್, ರಂಗೂನ್, ಕಾನ್ಪುರ್ ಮುಂತಾದ ಕಡೆಗಳಲ್ಲಿನ ಪತ್ರಿಕೆ ಕಾರ್ಯಾಲಯಗಳಿಗೆ ತಲಪಿರುತ್ತವೆ.

—

ಮುಂದಿನ ಕಾಂಗ್ರೆಸ್ ಅಧಿವೇಶನಕ್ಕೆ ವಿವಾರ್ಡುಗಳು ಕಾಕಿನಾಡದಲ್ಲಿ ಜೆನ್ನಾಗಿ ನಡೆಯುತ್ತಿವೆ ಕಾಂಗ್ರೆಸ್ ವಂಟಪದ ಡೇರಾ ಬೆಳಗಾವಿನಿಂದ ಕಾಕಿನಾಡಕ್ಕೆ ತಲಪಿದೆ

ಕಾಕಿನಾಡದ ಹಿಂದೀ ದೈನಿಕ ಪತ್ರಿಕೆಯಾದ ವರ್ತಮಾನ ಎಂಬ ಪತ್ರಿಕೆಯಲ್ಲಿ ರಾಜದ್ರೋಹಕರವಾದ ಲೇಖನಗಳು ಇದ್ದವೆಂದು ಅದರ ಸಂಪಾದಕರನ್ನು ಬಸ್ತಗಿರಿ ಮಾಡಲು ಹುಕುಂ !

ಂ ಂ

ಬ್ರಿಟಿಷ್ ಎಂಪೈರ್ ಕುಷ್ಠರೋಗ ನಿವಾರಣಾ ಸಂಘದವರು ಆಶಯವನ್ನು ಪುಷ್ಟೀಕರಿಸಿ ಇಂಡಿಯಾ ದೇಶದಲ್ಲಿ ಪ್ರಬಲವಾಗಿರುವ ಕುಷ್ಠರೋಗ ನಿವಾರಣಾರ್ಥವಾಗಿ ಮಾಡಬೇಕಾಗಿರುವ ಪರೀಕ್ಷಾ ಕಾರ್ಯಗಳನ್ನೂ ಔಷಧೋಪಚಾರಗಳನ್ನೂ ಮಾಡಲು ವೈಸರಾಯರು ತಮ್ಮ ಅಧ್ಯಕ್ಷತೆಯಿಂದ ಪ್ರಸಿದ್ಧಪತ್ರಿಕೆಯನ್ನು ಪ್ರಕಟಿಸಿ ಹಣವನ್ನು ಶೇಖರಿಸಲು ಉಪಕ್ರಮಿಸಿರುತ್ತಾರೆ. ಈ ಸಮಿತಿಯ ಉಪಾಧ್ಯಕ್ಷರು 6 ಮಂದಿಯರ ಪೈಕಿ ನಮ್ಮ ಮಹಾರಾಜರೊಬ್ಬರಾಗಿರುವದೂ, ಇವರು ಈ ನಿಧಿಗೆ 3 ಸಾವಿರ ರೂಪಾಯಿಗಳನ್ನು ಕೊಟ್ಟಿರುವದೂ ಸಂತೋಷಕರವಾದ ವರ್ತಮಾನವೇ ಸರಿ. ಈ ಸಂಬಂಧದಲ್ಲಿ ಬೆಂಗಳೂರಿನಲ್ಲಿ ದಿವಾನರವರ ಅಧ್ಯಕ್ಷತೆಯಲ್ಲಿಯೂ, ಮೈಸೂರಿನಲ್ಲಿ ಡಾ॥ ಸೀಲರವರ ಅಧ್ಯಕ್ಷತೆಯಲ್ಲೂ ಸ್ಥಳೀಯ ಜನರ ಸಭೆ ನಡೆಯಿತು.

ಂ ಂ

ಮುಂದೆ ಅನೇಕಾದ ನಿಕಟಾಗ್ನಿ ಎಂಬ ಪ್ರಾಣ್ಯದಲ್ಲಿ ಒಂದು ಬಗೆಯ ಜನಗಳಿವೆಯೆಂದು ಇವರ ನಡವಳಿಕೆಗಳೆಲ್ಲವೂ ಬಹು ವಿಚಿತ್ರವಾದುವು. ಅಲ್ಲಿನವರು ಯಾರಾದರೂ ವ್ಯತಿಪಟ್ಟರೆ ಒಂದು ಹುಬ್ಬೇ ಬಂದೆಂತೆ ಅದನ್ನು ಆಚರಿಸುವರು. ಯಾರಾದರೂ ಖಾಯಿಲೆಯಾದರೆ ಅವರ ಮರಣವನ್ನು ಬಹು ಉತ್ಸಾಹದಿಂದ ಎದುರುನೋಡುತ್ತಿರುವರು. ಅಲ್ಲಿನ ಕೊಲಿಯುವ ಭಾಂಡವನ್ನು ಯಾವಾಗಲೂ ಹೊರುತ್ತಿರುವದರಲ್ಲಿ ಸಂತೋಷವುಳ್ಳವರಾಗಿರುವದರಿಂದ ಯಾವ ಹೊರೆಯೂ ಸಿಕ್ಕದಿದ್ದರೆ ಕಲ್ಲುಗಳನ್ನಾದರೂ ಹೊರುವರು. ಅಲ್ಲಿನ ವದುವೆಯಲ್ಲಿ ವಧೂವರರು ಅವರ ತಾಯಿತಂದೆ ಹೊರತಾಗಿ ಉಳಿದವರೆಲ್ಲರೂ ಸ್ತ್ರೀಯರೇ ದೇವಸ್ಥಾನಗಳಲ್ಲಿ ಸೇರುವರು. ಇವರ ಬಂಧುವರ್ಗವೆಲ್ಲವೂ ಸೊಪದ ಛತ್ರದಲ್ಲಿಯೋ ಹೋಟಲುಗಳಲ್ಲಿಯೋ ಕಾಲಕಳೆಯುತ್ತಿದ್ದು ಮದುವೆ ಶಾಸ್ತ್ರ ತೀರಿದನಂತರ ಬಿರುವರು. ಒ ಪ

ಮಹಾತ್ಮಗಾಂಧಿಯವರು ಆಂಗ್ಲೇಯರನ್ನು ದ್ವೇಷಿಸುವರೇ?

—

ಒಬ್ಬ ಆಂಗ್ಲೇಯನಲ್ಲಿ ಸಂಭಾಷಣೆ.

—

ಒಬ್ಬ ಆಂಗ್ಲೇಯನು ನನ್ನನ್ನು (ಗಾಂಧಿಯವರನ್ನು) ನೋಡಲು ಬಂದು ನೀವು ಆಂಗ್ಲೇಯರನ್ನು ದ್ವೇಷಿಸುವಿರಾ? ಎಂದು ಪ್ರಶ್ನಿಸಿದನು. "ನಾನು ಆಂಗ್ಲೇಯರನ್ನು ತುಂಬಾ ಗೌರವದಿಂದ ನೋಡುವೆನು. ಏಕೆಂದರೆ ಅವರ ಧೈರ್ಯವನ್ನು ತಮಗೆ ಲಾಭಕರವೆಂದು ತೋರುವ ವಿಷಯಗಳಲ್ಲಿ ಅವರು ತೋರಿಸುವ ತ್ಯಾಗಶಕ್ತಿಯನ್ನೂ, ಅವರಲ್ಲಿರುವ ಏಕಮತ್ಯವನ್ನೂ, ಅಧಿಕ ವಿಶಾಲವಾದ ಅಂಗನಿರ್ಮಾಣವನ್ನು ಮಾಡುವುದರಲ್ಲಿ ಕೂಡ ಅವರಿಗಿರುವ ಸಾಮರ್ಥ್ಯವನ್ನು ನಾನು ನಾನು ಗ್ರಹಿಸಿರುವೆನು. ಆದ್ದರಿಂದ ನನಗೆ ಅವರಲ್ಲಿ ಅಧಿಕ ಗೌರವವಿರುವುದು ಅತ್ಯಲ್ಪ ಕಾಲದಲ್ಲಿ ಅವರು ಈಗ ಅವಲಂಬಿಸಿರುವ ಅಕ್ರಮ ಪದ್ಧತಿಯನ್ನು ದೂರಮಾಡುವರೆಂದು, ಸರಿಯಾದ ಅಂಗನಿರ್ಮಾಣವನ್ನು ಕ್ರಮಶಿಕ್ಷಣೆಯಲ್ಲಿಲ್ಲದ ದೇಶಗಳ ಧನ ವಸ್ತು ಸಂಪತ್ತುಗಳನ್ನು ವಶಮಾಡಿಕೊಳ್ಳುವ ಪದ್ಧತಿಯನ್ನು ಬಿಟ್ಟುಬಿಡುವರೆಂದು ಬ್ರಿಟಿಷ್ ಕಾಮನ್‌ವೆಲ್ತಿನಲ್ಲಿ ಭಾರತದೇಶವು ಸಮಾನ ಗೌರವವುಳ್ಳ ಭಾಗವಾಗಿ ಏಕ್ಯದೇಶವಾಗಿರುವುದೆನ್ನುವುದಕ್ಕೆ ಯೋಗ್ಯವಾದ ನಿದರ್ಶನಗಳನ್ನು ತೋರಿಸುವದೆಂದೂ ನನ್ನ ಅತ್ಯಂತ ಆಶೆಯು ಈ ಫಲಿತವು ಉಂಟಾಗುವುದೂ, ಅಗದಿರುವಿಕೆಯೂ, ಭಾರತೀಯರು ಮಾಡುವ ಕಾರ್ಯಗಳಲ್ಲಿಯೇ ಆಧಾರವಾಗಿದೆಯೆಂದು ನನ್ನ ನಂಬಿಕೆ.

ಭಾರತದೇಶದ ಮಿತ್ರತ್ವವನ್ನು ಸಂಪಾದಿಸುವದಕ್ಕೆ ಆಂಗ್ಲದೇಶಿಯರು ಸಂತೋಷಪಡುವ ಕಾಲವು ಶ್ವರಿತದಲ್ಲಿಯೇ ಬರುವುದು. ಆ ರೀತಿಯಲ್ಲಿ ಆಂಗ್ಲೇಯರು ಮನಃಪೂರ್ವಕವಾಗಿ ಭಾರತೀಯರ ವೈತ್ರಿಯನ್ನು ಅಪೇಕ್ಷಿಸಿದಾಗ ಅಷ್ಟರಲ್ಲಿ ಆಂಗ್ಲೇಯರು ಭಾರತದೇಶದ ಸಂಪತ್ತನ್ನು ವಶಮಾಡಿಕೊಳ್ಳುವರೆಂಬ ಕಾರಣದಿಂದ ಭಾರತೀಯರು ಅವರ ಮೈತ್ರಿಯನ್ನು ತಿರಸ್ಕರಿಸುವರು" ಎಂದು ನಾನು ನುಡಿದೆನು. ಎಂದು ಮಹಾತ್ಮ ಗಾಂಧಿಯವರು "ಯಂಗ್ ಇಂಡಿಯಾ" ಪತ್ರಿಕೆಯಲ್ಲಿ ಪ್ರಚುರಿಸಿರುವರು.

ಕಲ್ಕತ್ತಾದ ಬಂಗಾಲೀ ಪತ್ರಿಕೆಯು ಕಾರ್ಯನಿಷ್ಠಕತ್ವವನ್ನು ತೆಗೆದುಕೊಳ್ಳಲು ಒಂದು ಸುಳ್ಳು ವೇಷಾಡಾಗುತ್ತಿದೆ.

ಮಕ್ಕಳಕೈಲಿ ಬೆಂಕೀಕಡ್ಡಿ ಕೊಡಬಾರದೆಂಬುದನ್ನು ಈ ದೃಷ್ಟಾಂತದಿಂದ ವ್ಯಕ್ತವಾಗುತ್ತದೆ. ರಂಗೂನಿನಲ್ಲಿ 6 ವರ್ಷದ ಒಂದು ಹುಡುಗಿಯು ಬೆಂಕೀಪೆಟ್ಟಿಗೆ ಇಟ್ಟುಕೊಂಡು ಆಡುತ್ತಿತ್ತೆಂದೂ ಕಡ್ಡಿ ಹತ್ತಿ ಹುಡಗಿಗೆ ತುಂಬಾ ಗಾಯವಾಗಿ ಹುಡುಗಿಯನ್ನು ಆಸ್ಪತ್ರೆಗೆ ಕರದುಕೊಂಡುಹೋಗಿ ಔಷಧಹಾಕಿಸಿಕೊಂಡು ಬಂದರೆಂದೂ, ಮಾರನೇ ದಿನ ಆಸ್ಪತ್ರೆಗೆ ಹೋಗುವಾಗ ಕಾಲವಾಯಿತೆಂದೂ ತಿಳಿಯಬಂದಿದೆ.

ಬೀಹಾರ್ ಮತ್ತು ಒರಿಸ್ಸಾ ಲೆಜಿಸ್ಲೇಟಿವ್ ಕೌನ್ಸಿಲಿನವರು ತಮ್ಮ ಪ್ರಾಂತ್ಯದಲ್ಲಿ ದೇಶಭಾಷೆ ಅಭಿವೃದ್ಧಿಯಾಗಲು ಮಾಡಬೇಕಾದ ಏರ್ಪಾಡುಗಳನ್ನು ಪರ್ಯಾಲೋಚಿಸಲು ಶೀಘ್ರದಲ್ಲೇ ಒಂದು ಸಮ್ಮೇಳನ ನಡೆಸಬೇಕೆಂದು ಸರ್ಕಾರದವರನ್ನು ವಿಜ್ಞಾಪಿಸಲು ಒಂದು ಠರಾವುಮಾಡಿರುತ್ತಾರೆ.

—

ಲಾಹೋರಿನ ಒಬ್ಬ ಯೌವ್ವನಸ್ಥ ವೈದ್ಯನಾದ ಮಿ|| ಆಂಬಾಪ್ರಸಾದ ಖಿಲ್ಲರ್ ಎಂಬಾತನು ಉಪವಾಸವನ್ನಾಹರಿಸುತ್ತಿರುವನೆಂದೂ, ಪ್ರಾರಂಭಿಸಿ 12 ದಿನಗಳಮೇಲಾಯಿತೆಂದೂ, ನಿಜವಾಗಿ ಸುಯಾದ ಹಸುವಾಗುವತನಕ ಉಪವಾಸ ಬಿಡುವುದಿಲ್ಲವೆಂದೂ, ಈಚೀಜೆಗೆ ಸ್ವಲ್ಪ ನೀರನ್ನು ಮಾತ್ರ ಕುಡಿಯುತ್ತಿರುತ್ತಾನೆಂದೂ ಲಾಹೋರಿನ "ವಂದೇಮಾತರಂ" ಪತ್ರಿಕೆ ತಿಳಿಸುತ್ತದೆ.

—

ಲಾಹೋರಿನ ನ್ಯಾಷನಲ್ ಧರ್ಮ ಕಾಲೇಜಿಗೂ, ಮತ್ತು ಅನೇಕ ಇತರ ವಿದ್ಯಾಲಯಗಳಿಗೂ ಬರ್ಡ್ವಾನ್ ಮಹಾರಾಜರು ದ್ರವ್ಯಸಹಾಯ ಮಾಡಿರುತ್ತಾರೆ.

—

ವೈಸರಾಯ ಸಂಪದಭ್ಯುದಯ ಪತ್ರಿಕೆಯಲ್ಲಿ ತಾನು ಪ್ರಕಟಿಸಿದ್ದ ಒಂದು ಲೇಖನದ ಸಲುವಾಗಿ ಗೋಪಾಲಸ್ವಾಮಿ ಐಯ್ಯರ್ ಎಂಬುವರ ಮೇಲೆ ಅಬ್ಬಾಸ್ ಖಾನರು ಮಾನನಷ್ಟ ಮೊಖದ್ದಮೆಯನ್ನು ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರವರ ಕೋರ್ಟಿನಲ್ಲಿ ದಾಖಲ್ಮಾಡಿದ್ದರು. ಗೋಪಾಲಸ್ವಾಮಿ ಐಯ್ಯರವರು ಕ್ಷಮಾಪಣೆ ಬೇಡಿದ್ದಕ್ಕಾಗಿ ಮೊಖದ್ದಮೆ ರಾಜಿಯಾಯಿತು.

ಂ ಂ

ಜಡ್ಜಿಗಳೂ ಮ್ಯಾಜಿಸ್ಟ್ರೇಟರೂ ಮಾಡುವ ಕೆಲಸವೇ ಕೆಲಸ! ತಿರುವೆಲ್ಲೂರಿನ ಡಿಪ್ಯೂಟಿ ಕಲೆಕ್ಟರ್-ಮ್ಯಾಜಿಸ್ಟ್ರೇಟರವರು 15 ದಿನಗಳ ಹಿಂದೆ ರಾತ್ರಿಕಾಲದಲ್ಲಿ ಅಲ್ಲಿಯ ಡಾಕ್ಟರ್ ಜೊತೆಯಲ್ಲಿ ಜಟಕಾ ಗಾಡಿಯಲ್ಲಿ ಬರುತ್ತಿದ್ದರಂತೆ. ಪಕ್ಕದ ಹಳ್ಳೀ ಹುಡುಗರು ತಮಾಷೆಗೆ ದಾರಿಯಲ್ಲಿ ಅಡ್ಡಗಟ್ಟಿದರಂತೆ. ಮ್ಯಾಜಿಸ್ಟ್ರೇಟರು ಹೆದರಿಸಲು ಒಬ್ಬ ಹುಡುಗನು ಮೆತ್ತಗೆ ಗಾಡಿ ಕಟಾಣಿಯನ್ನು ಕಳಚಿದನಂತೆ. ಅದು ತಿಳಿಯದೆ ಗಾಡಿಬಿಟ್ಟುಕೊಂಡು ಹೊರಡಲು, ಹುಡುಗರು ಎಚ್ಚರಿಸಿ, ಕಟಾಣಿಯನ್ನು ತೊಟ್ಟರಂತೆ. ಮಾರನೇ ದಿವಸ ಅಧಿಕಾರಿ ವರ್ಗದವರು ವಿಚಾರಣೆ ಮಾಡಿ, ಕಟಾಣಿ ತೆಗೆದ ಹುಡುಗನ ಮೇಲೆ ಮೊಖದ್ದಮೆ ತಂದರು. ಜಟಕಾ ಗಾಡಿಯವನೇ ಫಿರ್ಯಾದಿಯಾಗಿಯೂ ಕಟಾಣಿ ಕೊಡಿಸಿದ ಹುಡುಗರೇ ಸಾಕ್ಷಿಗಳಾಗಿಯೂ ಮಾಡಲಾಯಿತು ಆ ಮ್ಯಾಜಿಸ್ಟ್ರೇಟರು ತಾವೇ ಖುದ್ದಾಗಿ ಮೊಖದ್ದಮೆ ವಿಚಾರಣೆಮಾಡಿ ಸಾಕ್ಷಿಗಳ ಹೇಳಿಕೆಯನ್ನು ತಾವೇ ತಗೆದುಕೊಂಡು, ವಿದ್ಯವಿಲ್ಲದ ಆ ಬಡ 12 ವರ್ಷದ ಅಪರಾಧಿ ಹುಡುಗನ "ಸ್ಟೇಟ್‌ಮೆಂಟನ್ನು" ಬರೆದುಕೊಂಡು ಹುಡುಗನಿಗೆ 15 ಚಡಿ ಏಟುಗಳನ್ನು ದಯಪಾಲಿಸಿದರು. ಅಷ್ಟೇ ಅಲ್ಲ ಏಟುಗಳನ್ನು ತಮ್ಮ ಕೈಯ್ಯಿಂದಲೇ ಹೊಡೆದರಂತೆ!

ಜುಲೈ ತಿಂಗಳಿಂದ ಮೈಸೂರಿನ ರೆಸಿಡೆಂಟರಾಗಿ ಮಿ|| ಬಾರ್ಟನ್ ರವರು ಹೈದರಾಬಾದಿನ ರೆಸಿಡೆಂಟರಾಗಿ ಹೋಗುವರೆಂದೂ, ರಜಾ ಮುಗಿದ ನಂತರ ಮಿ|| ಪಿಯರ್ಸ್‌ರವರು ಮೈಸೂರು ರೆಸಿಡೆಂಟರಾಗಿ ಬರುವರೆಂದೂ ತಿಳಿಯಬಂದಿದೆ.

—

ಕ್ಷಯರೋಗದಿಂದ ಪೀಡಿತನಾದ ರೋಗಿಯಿರುವ ಕೂತಡಿಯಲ್ಲಿ ಹಾಸಿರುವ ಜಮಖಾನೆಯ ತಳಿಗಿನ ಧೂಳನ್ನು ಸೇರಿಸಿ, ಅಲ್ಲಿಗೆ 48 ಹಂಗಳನ್ನು ಬಿಡಲು ಅವುಗಳಲ್ಲಿ 47 ಕ್ಷಯರೋದಿಂದಲೇ ಸತ್ತವಂತೆ. ಹೀಗೆಂದಮೇಲೆ ಕ್ಷಯರೋಗವು ಎಷ್ಟು ಭಯಂಕರವಾದ ರೋಗವೆಂಬೇಕೊ, ಆರೋಗ್ಯದ ವಿಷಯದಲ್ಲಿ ಜನರು ಎಷ್ಟರಮಟ್ಟಿಗೆ ಹುಷಾರಿನಿಂದಿರಬೇಕೋ ನೀವೇ ಯೋಚಿಸಿ.

—

ಕಲ್ಕತ್ತಾದಲ್ಲಿ ಒಬ್ಬ ಹಿಂದೂ ಹುಡುಗನನ್ನು ಜುಲುಂನಿಂದ ಜಾತಿಕೆಡಿಸಿ ಮಹಮದೀಯಮತಕ್ಕೆ ಸೇರಿಸಿಕೊಂಡದ್ದಕ್ಕಾಗಿ 3 ಜನರು ದಸ್ತಗಿರಿಮಾಡಲ್ಪಟ್ಟಿರುವರು.

—

ಗಾಜು ಕಳೆದುಕೊಂಡ ಕಾಲದಲ್ಲಿ ವರ್ಷಕ್ಕೆ 3 ಲಕ್ಷ ರೂಪಾಯಿಗಳನ್ನು ಸಭಾ ರಾಜರಿಗೆ ಕೊಡುವದಾಗಿ ಇಂಡಿಯಾ ಸರ್ಕಾರದವರು ವಾಗ್ದಾನ ಮಾಡಿದ್ದರೆಂದೂ, ಇಲ್ಲಿಯವರೆಗೆ 50 ಸಾವಿರ ರೂಪಾಯಿಗಳು ಮಾತ್ರ ಕೊಡಲ್ಪಟ್ಟಿದೆಯೆಂದೂ ಅಕಾಲಿ ಪತ್ರಿಕೆಯು ತಿಳಿಸುತ್ತದೆ.

ಂ ಂ

ಮುಂದೆ ರಾಜಕೋಟಾ ರಾಷ್ಟ್ರೀಯ ಪಾಠಶಾಲೆಯ ಸಮಾರಂಭೋತ್ಸವವನ್ನು ನಡೆಸಲು ಹೋದಾಗ, ಮಹಾತ್ಮಗಾಂಧಿಯವರಿಗೆ ಒಂದು "ಆಡ್ರೆಸ್ಸನ್ನು" ಕೊಡಲು ಅಲ್ಲಿನ ಪ್ರಜಾಪ್ರತಿನಿಧಿಸಭೆಯಲ್ಲಿ ಏಕಕಂಠದಿಂದ ನಿರ್ಣಯಿಸಲ್ಪಟ್ಟಿದೆ.

—

ಬೊಂಬಾಯಿನ ಚಾವ್ಲಾ ಖೂನಿ ಸಂಬಂಧದಲ್ಲಿ ಬೊಂಬಾಯಿನಲ್ಲಿ ಇಂದೂರು ಅಸ್ಥಿವಾರದ ವಿನಾಯಕವ.ಆ'ಗೇನ'ಕರ' ಎಂಬವನ್ನು ಪೋಲೀಸಿನವರು ದಸ್ತಗಿರಿ ಮಾಡಿರುತ್ತಾರೆ

—

ಜರ್ಮನಿಯ ಹಿಂದಿನ ಚಕ್ರವರ್ತಿಯವರಾದ ಕೈಜರವರು ಈಗ ಹಾಲೆಂಡಿನಲ್ಲಿರುವದು ಗೊತ್ತಾಯಿಷ್ಟೆ. ಅವರು ತುಂಬಾ ವಯಸ್ಕರು. ಇತ್ತೀಚೆಗೆ ಒಬ್ಬಳು ಯೌವ್ವನಸ್ಥೆಯಾದ ಹುಡುಗಿಯನ್ನು ವರಿಸಿರುತ್ತಾರೆ. ಇದನ್ನು ನೋಡಿ ಜನರು ಹಾಸ್ಯಾಸ್ಪದವಾಗಿ ಮಾತನಾಡಿಕೊಳ್ಳುತ್ತಿದ್ದರು. ಚಕ್ರವರ್ತಿಯವರು ಈಚೆಗೆ ಯುದ್ಧಕ್ಕೆ ಸಂಬರುವ ಕೋತಿ ಶೀರದೆ ಒಂದು ರಸವನ್ನು ತಮ್ಮ ರಕ್ತಕ್ಕೆ ಸೇರುವಂತೆ ಮಾಡಿಕೊಂಡರೆಂದೂ ಈಗ ತಮ್ಮ ಮಗನಿಗಿಂತಲೂ ಚಿಕ್ಕವಯಸ್ಕರಾಗಿ ಕಾಣುವರೆಂತಲೂ ತಿಳಿಯಬಂದಿದೆ.

Printed and published by M. Krishna Rao at the SATYAVADI Press, Mysore